<u>**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**</u>

ಸಿ.ಸಿ. ನಂಃ 1223/2022 ಸಿಡಬ್ಲ್ಯೂ: 14 ಪಿಡಬ್ಲ್ಯೂ: 9

ಪ್ರಮಾಣವಚನ ಬೋಧಿಸಲಾಯಿತು ದಿಃ 16-11-2024

ಹೆಸರು : ಪೃಥ್ವಿರಾಜ್

ತಂದೆ ಹೆಸರು : ಕರಣ ಪ್ರಸಾದ್

ವಯಸ್ಸು : 62 ವರ್ಷ

ಉದ್ಯೋಗ : ನಿವೃತ್ತ ಪಿ ಎಸ್ ಐ

ವಾಸಸ್ಥಳ : ಕಲಬುರಗಿ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ನಾನು ದಿಃ 03-07-2021 ರಿಂದ ದಿಃ 04-02-2022 ವರೆಗೆ ಮಳಖೇಡ್ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 04-12-2021 ರಂದು ಈ ಕೇಸಿನಲ್ಲಿ 3 ನೇ ಹಾಗೂ 4 ನೇ ಆರೋಪಿತರಾದ ಅಖಿಲ್ ಬಡಿ ಮತ್ತು ತೋಫಿಕ್ ಬಡಿರವರು ನಿರೀಕ್ಷಣ ಜಾಮಿನಿನ ಆದೇಶದ ಮೇರೆಗೆ ಪೊಲೀಸ್ ಠಾಣೆಗೆ ಬಂದು ಹಾಜರು ಆಗಿರುತ್ತಾರೆ. ಸದರಿಯವರನ್ನು ದಸ್ತಗಿರಿ ನಿಯಮ ಪಾಲಿಸಿ ಹಾಗೂ ಮಾನ್ಯ ನ್ಯಾಯಾಲಯದ ಆದೇಶದಂತೆ ಜಾಮೀನು ಬಾಂಡು ಪಡೆದುಕೊಂಡು ಜಾಮಿನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿ. 11-03-2022 ರಂದು ಮಾನ್ಯ ಉಪ ನಿರ್ದೇಶಕರು ಆಹಾರ ಇಲಾಖೆ ಇವರಿಗೆ ಯಾದಿ ಬರೆದುಕೊಂಡು ಪ್ರಕರಣದಲ್ಲಿ ಜಪ್ತು ಮಾಡಿಕೊಂಡ 2ಲಾರಿಗಳನ್ನು ತನಿಖೆ ಮುಗಿಯುವ ವರೆಗೂ ಪೋಲೀಸ್ ಠಾಣೆಯಲ್ಲಿ ಇಟ್ಟುಕೊಳ್ಳಲು ವಿನಂತಿಸಿಕೊಂಡಿದ್ದೆನು. ನಂತರ ಈ ಪ್ರಕರಣವನ್ನು ಚಾ ಸಾ 15 ರವರಿಗೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ಸದರಿ ದಾಖಲಾತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 7ಎಂದು ಗುರುತಿಸಲಾಯಿತು. ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 7(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎ ಎಂ ವಕೀಲರಿಂದಃ

ದಿಃ 04-12-2021 ರಂದು ಈ ಕೇಸಿನಲ್ಲಿ 3 ನೇ ಹಾಗೂ 4 ನೇ ಆರೋಪಿತರಾದ ಅಖಿಲ್ ಬಡಿ ಮತ್ತು ತೋಫಿಕ್ ಬಡಿರವರು ನಿರೀಕ್ಷಣ ಜಾಮಿನಿನ ಆದೇಶದ ಮೇರೆಗೆ ಪೊಲೀಸ್ ಠಾಣೆಗೆ ಬಂದು ಹಾಜರು ಆಗಿರುತ್ತಾರೆ

ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿಯವರನ್ನು ದಸ್ತಗಿರಿ ನಿಯಮ ಪಾಲಿಸಿ ಹಾಗೂ ಮಾನ್ಯ ನ್ಯಾಯಾಲಯದ ಆದೇಶದಂತೆ ಜಾಮೀನು ಬಾಂಡು ಪಡೆದುಕೊಂಡು ಜಾಮಿನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ದಿ. 11-03-2022 ರಂದು ಮಾನ್ಯ ಉಪ ನಿರ್ದೇಶಕರು ಆಹಾರ ಇಲಾಖೆ ಇವರಿಗೆ ಯಾದಿ ಬರೆದುಕೊಂಡು ಪ್ರಕರಣದಲ್ಲಿ ಜಪ್ತು ಮಾಡಿಕೊಂಡ 2ಲಾರಿಗಳನ್ನು ತನಿಖೆ ಮುಗಿಯುವ ವರೆಗೂ ಪೋಲೀಸ್ ಠಾಣೆಯಲ್ಲಿ ಇಟ್ಟುಕೊಳ್ಳಲು ವಿನಂತಿಸಿಕೊಂಡಿದ್ದೆನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಈ ಪ್ರಕರಣವನ್ನು ಚಾ ಸಾ 15 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಾನು ನನ್ನ ಮೇಲಧಿಕಾರಿಗಳ ಮಾತನ್ನು ಕೇಳಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**